ಓಎಸ್. 174/2016

ಪಿಡಬ್ಲ್ಯು. 1

**ಸಾಕ್ಷಿಯನ್ನು ದಿಃ 23.11.2017 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ವಾದಿಯ ಪರ ಶ್ರೀ ಎಸ್ ಎ ವಕೀಲರಿಂದಃ**

ಈಗ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ಸರ್ಕಾರದಿಂದ ದಾವಾಸ್ತಿಯು ನನಗೆ ಮಂಜೂರಾದ ಬಗ್ಗೆ ಮಂಜೂರಾತಿಯ ಅಸಲು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 1 ಎಂದು, ದಾವಾಸ್ತಿಗೆ ಸಂಬಂದಪಟ್ಟಂತೆ 2 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 2 ಮತ್ತು 3 ಎಂದು, ದಾವಾಸ್ತಿಗೆ ಸಂಬಂದಪಟ್ಟಂತೆ ಒಂದು ಎಂ.ಆರ್. ನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 4 ಎಂದು, ದಾವಾಸ್ತಿಗೆ ಸಂಬಂದಪಟ್ಟಂತೆ ದುರಸ್ತಿ ಮಾಡಿದ ಬಗ್ಗೆ ದುರಸ್ತಿಯನ್ನು ಕೋರಿ ನೀಡಿದ ಒಂದು ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 5 ಎಂದು, ದಾವಾಸ್ತಿಯ ಬಗ್ಗೆ ಸೆಟಲ್‌ಮಂಟ್ ಆಕಾರ್ ಬಂದ್‌ನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 6 ಎಂದು, ದಾವಾಸ್ತಿಯ ಬಗ್ಗೆ ಅದ್ದುಬಸ್ತು ಮಾಡಿಸಿದ್ದು, ಅದಕ್ಕೆ ಸಂಬಂದಪಟ್ಟ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 7 ಎಂದು, ನಾನು ನನ್ನ ವಕೀಲರ ಮುಖಾಂತರ ಪ್ರತಿವಾದಿಗೆ ನೋಟಿಸ್‌ನ್ನು ಕೊಟ್ಟಿದ್ದು, ಅದರ ಕಛೇರಿ ಪ್ರತಿಯನುನ ನಿ ಪಿ 8 ಎಂದು, ಅದಕ್ಕೆ ಸಂಬಂದಪಟ್ಟಂತೆ ಅಂಚೆ ರಸೀದಿಯನ್ನು ನಿ ಪಿ 9 ಎಂದು, ನಾನು ಕೊಟ್ಟ ನೋಟಿಸ್‌ಗೆ ಪ್ರತಿವಾದಿಯು ಕೊಟ್ಟ ಪ್ರತ್ಯುತ್ತರವನ್ನು ನೀಡಿದ್ದು ಅದನ್ನು ನಿ ಪಿ 10 ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**(ತೆರೆ ದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳ ಚ್ಚು ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಎ.ಸಿ. ದಯಾನಂದ ಮೂರ್ತಿ)**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ ಎಫ್‌ಸಿ,

ಬಂಗಾರಪೇಟೆ.